# ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಚರಿತ್ರೆ ವಿಭಾಗ**

**ಕರ್ನಾಟಕ ಸಂಭ್ರಮ ೫೦**ರ ಸ್ಮರಣೆ ಅಂಗವಾಗಿ

**ಪಾಕ್ಷಿಕ ಮಾತು–೩೫**

**ಕರ್ನಾಟಕ ಏಕೀಕರಣ ಹಾಗೂ ಕರ್ನಾಟಕ ನಾಮಕರಣ**

ಕಾರ್ಯಕ್ರಮ – **3.11.2023**

## ಕನ್ನಡಕ್ಕೆ ದುಡಿದ ಜನಸಾಮಾನ್ಯರ ತಲಸ್ಪರ್ಶಿ ಅಧ್ಯಯನ ಅವಶ್ಯಕ– ಡಾ.ವಿರೂಪಾಕ್ಷಿ ಪೂಜಾರಹಳ್ಳಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ. ಚರಿತ್ರೆ ವಿಭಾಗವು **ಕರ್ನಾಟಕ ಸಂಭ್ರಮ ೫೦ರ ಸ್ಮರಣೆ ಅಂಗವಾಗಿ** ದಿನಾಂಕ ೩.೧೧.೨೦೨೩ ರಂದು ವಿಭಾಗದಲ್ಲಿ **ಪಾಕ್ಷಿಕ ಮಾತು–೩೫ರ** ಭಾಗವಾಗಿ **ಕರ್ನಾಟಕ ಏಕೀಕರಣ ಹಾಗೂ ಕರ್ನಾಟಕ ನಾಮಕರಣದ** ಚಾರಿತ್ರಿಕ ಹಿನ್ನೆಲೆಯನ್ನು ಕುರಿತು ಸಂಶೋಧನಾರ್ಥಿಗಳಿಂದ ವಿಷಯ ಮಂಡನೆಯ ಕಾರ್ಯಕ್ರಮ ಆಯೋಜಿಸಲಾಗಿತ್ತು.



ಪ್ರಾಧ್ಯಾಪಕರಾದ **ಡಾ. ವಿರೂಪಾಕ್ಷಿ ಪೂಜಾರಹಳ್ಳಿ** ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

**ಕರ್ನಾಟಕ ಏಕೀಕರಣ** ಕುರಿತಾಗಿ ಸಂಶೋಧನಾ ವಿದ್ಯಾರ್ಥಿಯಾದ **ಮಂಜುನಾಥ್** ಅವರು ಕರ್ನಾಟಕ ಏಕೀಕರಣದ ಪೂರ್ವ ಹಿನ್ನೆಲೆ, ಭಾಷೆ ಒಗ್ಗೂಡುವಿಕೆ ಅದರ ತುರ್ತುಗಳು, ಏಕೀಕರಣ ಕಾಲಕ್ಕೆ ಎದುರಾದ ಪ್ರಾಂತ್ಯವಾದ ಗೊಂದಲಗಳು, ಏಕೀಕರಣ ನಡೆದು ಬಂದ ಹಾದಿ ಕುರಿತಾಗಿ ವಿಷಯ ಮಂಡಿಸಿದರು.

ಸಂಶೋಧನಾ ವಿದ್ಯಾರ್ಥಿ **ಸೋಮಪ್ಪ** ಸಿ. ಅವರು **ಕರ್ನಾಟಕ ನಾಮಕರಣ,** ಪೂರ್ವಾವಲೋಕನ, ನಾಮಕರಣಕ್ಕೆ ಎದುರಾದ ಭಿನ್ನಾಭಿಪ್ರಾಯಗಳು, ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಭಾಗದ ಜನರಲ್ಲಿನ ಗೊಂದಲಗಳು, ಪತ್ರಿಕೆಗಳ ಚರ್ಚಾ ವಿಚಾರಗಳು, ವಿದ್ವಾಂಸ ವಲಯದಲ್ಲಾದ ವಾದವಿವಾದಗಳು ಕರ್ನಾಟಕ ಹೆಸರಾಗುವಲ್ಲಿ ಮೂಡಿ ಬಂದ ಸನ್ನಿವೇಶಗಳ ಸಂಗತಿ ಕುರಿತು ವಿಷಯ ಮಂಡಿಸಿದರು. ನಂತರ ವಿಷಯ ಮಂಡನೆಗಳ ಮೇಲೆ ಚರ್ಚೆಗಳು ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಭಾಗದ ಪ್ರಾಧ್ಯಾಪಕರಾದ **ಡಾ. ವಿರೂಪಾಕ್ಷಿ ಪೂಜಾರಹಳ್ಳಿ** ಅವರು ಕರ್ನಾಟಕದ ಚಾರಿತ್ರಿಕ ಹಿನ್ನೆಲೆ, ಕರ್ನಾಟಕ ಸಾಗಿ ಬಂದ ದಾರಿ, ಏಕೀಕರಣಕ್ಕಾಗಿ ಶ್ರಮಿಸಿದ ಮಹಾನೀಯರು, ಸಂಘ ಸಂಸ್ಥೆಗಳ ಪಾತ್ರ, ತಮ್ಮದೇ ಕೊಡುಗೆ ನೀಡಿದ ಜನಸಾಮಾನ್ಯರು ಭಾಷಾವಾರು ವಿಚಾರ ಕರ್ನಾಟಕ ಏಕೀಕರಣಕ್ಕೆ ಎದುರಾದ ಸಮಸ್ಯೆ, ಪೂರಕವಾದ ಆಯೋಗಗಳು ಮುಂತಾದ ಜ್ವಲಂತ ಸಮಸ್ಯೆಗಳ ಬಗ್ಗೆ ಮಾತನಾಡಿದರು. ಕನ್ನಡಕ್ಕೆ ದುಡಿದ ಜನಸಾಮಾನ್ಯರ ತಲಸ್ಪರ್ಶಿ ಅಧ್ಯಯನ ಆಗಬೇಕು ಎಂಬುದಾಗಿ ಒತ್ತಿ ಹೇಳಿದರು.

ಕಾರ್ಯಕ್ರಮದಲ್ಲಿ ವಿಭಾಗದ ಪ್ರಾಧ್ಯಾಪಕರಾದ **ಡಾ. ಕೆ.ಮೋಹನ್‌ಕೃಷ್ಣ ರೈ, ಡಾ. ಎನ್.ಚಿನ್ನಸ್ವಾಮಿ ಸೋಸಲೆ** ಮತ್ತು ವಿಭಾಗದ **ಸಂಶೋಧನಾ ವಿದ್ಯಾರ್ಥಿಗಳು, ಸಿಬ್ಬಂದಿ ವರ್ಗ** ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಈ ಕಾರ್ಯಕ್ರಮವನ್ನು ಸಂಶೋಧನಾ ವಿದ್ಯಾರ್ಥಿಯಾದ **ಲೋಕೇಶ ಟಿ.** ನಿರೂಪಿಸಿದರು.

ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಪಾಕ್ಷಿಕ ಮಾತು – ೩೫**

**ಅಧ್ಯಕ್ಷತೆ**
**ಡಾ.ವಿರೂಪಾಕ್ಷಿ ಪೂಜಾರಹಳ್ಳಿ**
ಪ್ರಾಧ್ಯಾಪಕರು, ಚರಿತ್ರೆ ವಿಭಾಗ

**ವಿಷಯ**
ಕರ್ನಾಟಕ ಏಕೀಕರಣ

**ವಿಷಯ ಮಂಡನೆ**
**ಮಂಜುನಾಥ**
ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿ
ಚರಿತ್ರೆ ವಿಭಾಗ

**ವಿಷಯ**
ಕರ್ನಾಟಕ ನಾಮಕರಣ

**ವಿಷಯ ಮಂಡನೆ**
**ಸೋಮಪ್ಪ ಸಿ.**
ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿ
ಚರಿತ್ರೆ ವಿಭಾಗ

**ದಿನಾಂಕ :** ೦೩.೧೧.೨೦೨೩
**ಸಮಯ :** ಮಧ್ಯಾಹ್ನ ೦೨:೩೦ ಗಂಟೆ
**ಸ್ಥಳ :** ನಳಂದ ಸಭಾಂಗಣ, ಚರಿತ್ರೆ ವಿಭಾಗ

**ಎಲ್ಲರಿಗೂ ಸ್ವಾಗತ**

| | | |
|---|---|---|
| ಡಾ.ಕೆ.ಮೋಹನ್‌ಕೃಷ್ಣ ರೈ | ಲೋಕೇಶ ಟಿ. | ಡಾ.ವಿಜಯ್ ಪೂಣಚ್ಚ ತಂಬಂಡ |
| ಮುಖ್ಯಸ್ಥರು | ಸಂಚಾಲಕರು | ಕುಲಸಚಿವರು |
| ಚರಿತ್ರೆ ವಿಭಾಗ | ಪಿಎಚ್‌ಡಿ ವಿದ್ಯಾರ್ಥಿ | ಕನ್ನಡ ವಿಶ್ವವಿದ್ಯಾಲಯ, ಹಂಪಿ |

ಇವರಿಗೆ,

# ಕನ್ನಡ ವಿವಿ: ಪಾಕ್ಷಿಕ ಮಾತು ಕಾರ್ಯಕ್ರಮ

**ಹೊಸಪೇಟೆ (ವಿಜಯನಗರ):** ಸಮೀಪದ ಹಂಪಿ ಕನ್ನಡ ವಿವಿಯ ಚರಿತ್ರೆ ವಿಭಾಗದಲ್ಲಿ ಶುಕ್ರವಾರ ಕರ್ನಾಟಕ ಸಂಭ್ರಮ 50 ಸ್ಮರಣೆ ಅಂಗವಾಗಿ ಪಾಕ್ಷಿಕ ಮಾತು ಕಾರ್ಯಕ್ರಮದಲ್ಲಿ 'ಕರ್ನಾಟಕ ಏಕೀಕರಣ ಹಾಗೂ ಕರ್ನಾಟಕ ನಾಮಕರಣದ ಚಾರಿತ್ರಿಕ ಹಿನ್ನೆಲೆ' ಕುರಿತು ಸಂಶೋಧನಾರ್ಥಿಗಳಿಂದ ವಿಷಯ ಮಂಡನೆಯ ಕಾರ್ಯಕ್ರಮ ಹಮ್ಮಿಕೊಂಡಿದ್ದರು.

ಪ್ರಾಧ್ಯಾಪಕ ಡಾ.ವಿರೂಪಾಕ್ಷಿ ಪೂಜಾರಹಳ್ಳಿ ಕರ್ನಾಟಕದ ಚಾರಿತ್ರಿಕ ಹಿನ್ನೆಲೆ, ಸಾಗಿ ಬಂದ ದಾರಿ, ಏಕೀಕರಣಕ್ಕಾಗಿ ಶ್ರಮಿಸಿದ ಮಹಾನೀಯರು, ಸಂಘ ಸಂಸ್ಥೆಗಳ ಪಾತ್ರ ಹಾಗೂ ನೀಡಿದ ಕೊಡುಗೆ ಕುರಿತು ಮಾತನಾಡಿದ ಅವರು ಕನ್ನಡಕ್ಕೆ ದುಡಿದ ಜನಸಾಮಾನ್ಯರ ತಲಸ್ಪರ್ಶಿ ಅಧ್ಯಯನ ಆಗಬೇಕಿದೆ ಎಂದರು.

ಸಂಶೋಧನಾ ವಿದ್ಯಾರ್ಥಿಗಳಾದ ಮಂಜುನಾಥ್, ಸಿ.ಸೋಮಪ್ಪ ಅವರು ವಿಷಯ ಮಂಡಿಸಿದರು.

ಪ್ರಾಧ್ಯಾಪಕರಾದ ಡಾ.ಕೆ.ಮೋಹನ್‌ಕೃಷ್ಣ ರೈ, ಡಾ.ಎನ್.ಚಿನ್ನಸ್ವಾಮಿ ಸೋಸಲೆ, ಟಿ.ಲೋಕೇಶ್ ಸೇರಿದಂತೆ ಸಂಶೋಧನಾ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಭಾನುವಾರ • ನವೆಂಬರ್ 5, 2023 ಪ್ರಜಾವಾಣಿ

# ಕನ್ನಡ ವಿವಿ: ಪಾಕ್ಷಿಕ ಮಾತು ಕಾರ್ಯಕ್ರಮ

**ಹೊಸಪೇಟೆ (ವಿಜಯನಗರ):** ಸಮೀಪದ ಹಂಪಿ ಕನ್ನಡ ವಿವಿಯ ಚರಿತ್ರೆ ವಿಭಾಗದಲ್ಲಿ ಶುಕ್ರವಾರ ಕರ್ನಾಟಕ ಸಂಭ್ರಮ 50 ಸ್ಮರಣೆ ಅಂಗವಾಗಿ ಪಾಕ್ಷಿಕ ಮಾತು ಕಾರ್ಯಕ್ರಮದಲ್ಲಿ 'ಕರ್ನಾಟಕ ಏಕೀಕರಣ ಹಾಗೂ ಕರ್ನಾಟಕ ನಾಮಕರಣದ ಚಾರಿತ್ರಿಕ ಹಿನ್ನೆಲೆ' ಕುರಿತು ಸಂಶೋಧನಾರ್ಥಿಗಳಿಂದ ವಿಷಯ ಮಂಡನೆಯ ಕಾರ್ಯಕ್ರಮ ಹಮ್ಮಿಕೊಂಡಿದ್ದರು.

ಪ್ರಾಧ್ಯಾಪಕ ಡಾ.ವಿರೂಪಾಕ್ಷಿ ಪೂಜಾರಹಳ್ಳಿ ಕರ್ನಾಟಕದ ಚಾರಿತ್ರಿಕ ಹಿನ್ನೆಲೆ, ಸಾಗಿ ಬಂದ ದಾರಿ, ಏಕೀಕರಣಕ್ಕಾಗಿ ಶ್ರಮಿಸಿದ ಮಹಾನೀಯರು, ಸಂಘ ಸಂಸ್ಥೆಗಳ ಪಾತ್ರ ಹಾಗೂ ನೀಡಿದ ಕೊಡುಗೆ ಕುರಿತು ಮಾತನಾಡಿದ ಅವರು ಕನ್ನಡಕ್ಕೆ ದುಡಿದ ಜನಸಾಮಾನ್ಯರ ತಲಸ್ಪರ್ಶಿ ಅಧ್ಯಯನ ಆಗಬೇಕಿದೆ ಎಂದರು.

ಸಂಶೋಧನಾ ವಿದ್ಯಾರ್ಥಿಗಳಾದ ಮಂಜುನಾಥ್, ಸಿ.ಸೋಮಪ್ಪ ಅವರು ವಿಷಯ ಮಂಡಿಸಿದರು.

ಪ್ರಾಧ್ಯಾಪಕರಾದ ಡಾ.ಕೆ. ಮೋಹನ್‌ಕೃಷ್ಣ ರೈ, ಡಾ.ಎನ್. ಚಿನ್ನಸ್ವಾಮಿ ಸೋಸಲೆ, ಟಿ.ಲೋಕೇಶ್ ಸೇರಿದಂತೆ ಸಂಶೋಧನಾ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.